# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : **1108** |
| ಸದಸ್ಯರ ಹೆಸರು | : ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 22.12.2021. |
| ಉತ್ತರಿಸುವ ಸಚಿವರು | :ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಗೋಮಾಳ ಜಮೀನು ಲಭ್ಯವಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 1939672-21.09 ಎಕರೆ/ಗುಂಟೆ ಗೋಮಾಳ ಜಮೀನಿರುತ್ತದೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ. |
| ಆ) | ಈ ಜಮೀನುಗಳ ಮಂಜೂರಾತಿ ಮಾಡಲು ಅನುಸರಿಸುವ ಮಾನದಂಡಗಳೇನು; | ಸರ್ಕಾರಿ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ಸಾಗುವಳಿದಾರರು ಭೂ ಮಂಜೂರಾತಿ ಕೋರಿ ನಮೂನೆ-50, ನಮೂನೆ-53 ಮತ್ತು ನಮೂನೆ-57ರಡಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ಅರ್ಜಿಗಳನ್ನು ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳಲ್ಲಿ ಮಂಡಿಸಿ ಮಂಜೂರಾತಿ ಮಾಡಲು ಕ್ರಮವಹಿಸಲಾಗುತ್ತಿದೆ. ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 108 ಎಫ್ ರನ್ವಯ ಮಂಜೂರಾತಿ ಮಾಡಲು ಅರ್ಜಿದಾರರು ಈ ಕೆಳಕಂಡ ಮಾನದಂಡಗಳನ್ನು ಹೊಂದಿರಬೇಕು.<br>1. ಅರ್ಜಿದಾರನ ವಯಸ್ಸು ಕನಿಷ್ಟ 18 ವರ್ಷಗಳಾಗಿರಬೇಕು.<br>2. ಅರ್ಜಿದಾರರು ಭೂ ರಹಿತರಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕಕ್ಕೆ 3 ವರ್ಷಗಳ ಮುಂಚಿತವಾಗಿ ಮಂಜೂರಾತಿ ಕೋರಿದ ಜಮೀನನ್ನು ನಿರಂತರ ಸಾಗುವಳಿ ಮಾಡುತ್ತಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂಧರ್ಭದಲ್ಲಿ.ಅಂಥ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ.<br>3. ಅವನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲ್ಲೂಕಿನಲ್ಲಿ ತಾಲ್ಲೂಕಿನ ಪರಿಮಿತಿಯೊಳಗೆ ಖಾಯಂ ನಿವಾಸಿಯಾಗಿರಬೇಕು.<br>4. ಅರ್ಜಿದಾರರ ಕುಟುಂಬದ ಜಮೀನು ಮತ್ತು ಮಂಜೂರಾತಿ ಕೋರಿರುವ ಜಮೀನು ಸೇರಿ ಒಟ್ಟು 4-38 ಎಕರೆ/ಗುಂಟೆ ಮೀರಿರಬಾರದು. |

| | | |
|---|---|---|
| | | 5. ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಉಪಬಂಧಗಳನ್ವಯ ಅರ್ಜಿದಾರನು ಜಮೀನು ಹೊಂದಿರುವುದಕ್ಕೆ ಅರ್ಹನಿರಬೇಕು.<br><br>ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 97(1) ರಲ್ಲಿ ನಿಗದಿಪಡಿಸಿರುವಂತೆ, ಗೋಮಾಳ ಜಮೀನು ಕೊರತೆ ಇದ್ದಲ್ಲಿಯೂ ಸಹ ನಮೂನೆ-50 ಹಾಗೂ ನಮೂನೆ-53 ರಡಿ ಬಾಕಿ ಇರುವಂತಹ ಎಲ್ಲಾ ಅರ್ಜಿಗಳನ್ನು ಒಂದುಬಾರಿ ಸಕ್ರಮಾತಿಗಾಗಿ ನಿಯಮಾನುಸಾರ ಪರಿಗಣಿಸಬಹುದಾಗಿದೆ. ಆದರೆ, ನಿಯಮ 97(1)ರಡಿ ನಿಯಮಿಸಿದ ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚಾಗಿದ್ದರೇ ನಮೂನೆ 57ರಲ್ಲಿ ಸ್ವೀಕರಿಸಿರುವ ಅರ್ಜಿಗಳನ್ನು ಸಕ್ರಮಗೊಳಿಸಲು ನಿಯಮಾನುಸಾರ ಪರಿಗಣಿಸಬಹುದಾಗಿದೆ. ನಿಯಮ 97(1)ರಡಿ ನಿಯಮಿಸಿದ ವಿಸ್ತೀರ್ಣಕ್ಕಿಂತ ಗೋಮಾಳ ಜಮೀನು ಕೊರತೆ ಇದ್ದಲ್ಲಿ ನಮೂನೆ 57 ರಲ್ಲಿ ಸ್ವೀಕರಿಸಿರುವ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.<br><br>ಮುಂದುವರೆದು, ಗೋಮಾಳ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(1)ರಡಿಯಲ್ಲಿ ಜಾನುವಾರುಗಳಿಗೆ ಅನುಗುಣವಾಗಿ ಮೀಸಲಿರಿಸಿದ ನಂತರ ಉಳಿಯುವ ಗೋಮಾಳ ಜಮೀನನ್ನು ನಿಯಮ 97(4)ರಡಿ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಸರ್ಕಾರದ ಉದ್ದೇಶಗಳಿಗೆ ಕಾಯ್ದಿರಿಸಬಹುದು. |
| ಇ) | ಕಂದಾಯ ಇಲಾಖೆಗೆ ಸೇರಿದ ಭೂಮಿಯನ್ನು ಕೆಲವರು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ವಿಸ್ತೀರ್ಣ ಒತ್ತುವರಿಯಾಗಿರುತ್ತದೆ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. ರಾಜ್ಯದಲ್ಲಿ ಒಟ್ಟು **14,27,195** ಎಕರೆ/ಗುಂಟೆ ಸರ್ಕಾರಿ ಜಮೀನು ಒತ್ತುವರಿಯಾಗಿರುತ್ತದೆ.<br>ಜಿಲ್ಲಾವಾರು ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ. |
| ಈ) | ಒತ್ತುವರಿ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯ ಪಡೆಗಳನ್ನು ರಚಿಸಲಾಗಿದೆ. ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳು ಕಾಲಬದ್ಧ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡಿದ್ದು, ಒತ್ತುವರಿ ಆಗಿರುವ ಸರ್ಕಾರಿ ಜಮೀನುಗಳನ್ನು ತೆರವುಗೊಳಿಸಲು ಕ್ರಮವಹಿಸುತ್ತಿದ್ದಾರೆ. |

| | | |
|---|---|---|
| | | ಕಾನೂನು/ಶಿಸ್ತು ಕ್ರಮಗಳನ್ನು ಜರುಗಿಸಲು ಸೂಚನೆ ನೀಡಲಾಗಿದೆ.<br><br>ರಾಜ್ಯದಲ್ಲಿರುವ ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸಲು ಹಾಗೂ ಸಂರಕ್ಷಿಸಲು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 15 ಎಲ್‌ಜಿಪಿ 2020; ದಿನಾಂಕ: 29.01.2020 ರ ಆದೇಶದ ಮೂಲಕ ಏಳು ಸದಸ್ಯರುಗಳನ್ನೊಳಗೊಂಡಂತೆ "ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ"ಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಜಿಲ್ಲೆಗಳ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಪ್ರತಿ ವಾರವೂ ಪರಿಶೀಲನಾ ಸಭೆಯನ್ನು ನಡೆಸುತ್ತಿದ್ದು, ಭೂ ಕಬಳಿಕೆ ತಡೆಯುವ ನಿಟ್ಟಿನಲ್ಲಿ ಅಗತ್ಯ ನಿರ್ದೇಶನಗಳನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ನೀಡಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 258 ಎಲ್‌ಜಿಕ್ಯೂ 2021 (ಇ)

(ಆರ್.ಅಶೋಕ)

ಕಂದಾಯ ಸಚಿವರು

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1108

## ಅನುಬಂಧ-1

### ರಾಜ್ಯದಲ್ಲಿ ಲಭ್ಯವಿರುವ ಗೋಮಾಳ ಜಮೀನಿನ ವಿವರ

| ಕ್ರ.ಸಂ. | ಜಿಲ್ಲೆ | ಲಭ್ಯವಿರುವ ಒಟ್ಟು ಗೋಮಾಳ ಜಮೀನಿನ ವಿಸ್ತೀರ್ಣ (ಎಕರೆ/ಗುಂಟೆ) |
|---|---|---|
| 1 | ಬೆಂಗಳೂರು ನಗರ | 107–19.00 |
| 2 | ಬೆಂಗಳೂರು ಗ್ರಾಮಾಂತರ | 34564–22.00 |
| 3 | ಬಾಗಲಕೋಟೆ | 6903–04.00 |
| 4 | ಬೆಳಗಾವಿ | 68058–17.08 |
| 5 | ಬಳ್ಳಾರಿ | 43–39.00 |
| 6 | ಬೀದರ್ | 16582–15.00 |
| 7 | ಚಾಮರಾಜನಗರ | 18992–23.00 |
| 8 | ಚಿಕ್ಕಬಳ್ಳಾಪುರ | 61995–20.00 |
| 9 | ಚಿಕ್ಕಮಗಳೂರು | 168761–18.00 |
| 10 | ಚಿತ್ರದುರ್ಗ | 472752–20.00 |
| 11 | ದಕ್ಷಿಣ ಕನ್ನಡ(ಮಂಗಳೂರು) | 6412–6486.00 |
| 12 | ದಾವಣಗೆರೆ | 136160–13.00 |
| 13 | ಧಾರವಾಡ | 6195–29.00 |
| 14 | ಗದಗ | 1704–29.00 |
| 15 | ಹಾಸನ | 15323–00.00 |
| 16 | ಹಾವೇರಿ | 16488–24.09 |
| 17 | ಕಲಬುರಗಿ | 52505–20.00 |
| 18 | ಕೊಡಗು | 1150–55.00 |
| 19 | ಕೋಲಾರ | 178338–03.08 |
| 20 | ಕೊಪ್ಪಳ | 21763–39.00 |
| 21 | ಮಂಡ್ಯ | 96652–24.00 |
| 22 | ಮೈಸೂರು | 144568–26.00 |
| 23 | ರಾಯಚೂರು | 7617–00.00 |
| 24 | ರಾಮನಗರ | 25387–12.00 |
| 25 | ಶಿವಮೊಗ್ಗ | 158351–00.00 |
| 26 | ತುಮಕೂರು | 163206–18.00 |
| 27 | ಉತ್ತರ ಕನ್ನಡ(ಕಾರವಾರ) | 1984–33.11 |
| 28 | ಉಡುಪಿ | 3823–52.05 |
| 29 | ವಿಜಯಪುರ | 15945–24.00 |
| 30 | ಯಾದಗಿರಿ | 29732–15.00 |
| 31 | ವಿಜಯನಗರ | 7435–00.00 |
|  | ಒಟ್ಟು | **1939672–21.09** |

ಅನುಬಂಧ - 2

## KARNATAKA PUBLIC LANDS CORPORATION LIMITED, BENGALURU

G-8C

| DETAILS OF ENCROACHMENT REMOVAL ON GOVERNMENT LAND (REVENUE)( extent in acres) as on 30-11-2021 | | | | | | | | | | | | |
|---|---|---|---|---|---|---|---|---|---|---|---|---|
| Sl. No | Name of the District | Extent of Government Land | Government land under encroachment | Encroachment Involved under | | | | Clear Balance to be removed (4-6) | Encroachment removed | | Total exent Removed (8+9) | Balance to be evicted (7-10) as on 30-11-2021 |
| | | | | 50-53, 94C | Court Cases | Public Purpose | Total | | Up to 31-12-2013 | 1-1-20 14 to 44530 | | |
| 1 | 2 | 3 | 4 | 5A | 5B | 5C | 6 | 7 | 8 | 9 | 10 | 11 |
| 1 | Bagalkote | 22734 | 1547 | 205 | 18 | 0 | 223 | 1324 | 327 | 337 | 664 | 660 |
| 2 | Bengaluru Rural | 108295 | 36229 | 23411 | 209 | 0 | 23620 | 12609 | 3176 | 8603 | 11779 | 830 |
| 3 | Bengaluru Urban ^ | 122918 | 38894 | 12179 | 2139 | 7881 | 22199 | 16695 | 10448 | 5972 | 16420 | 275 |
| 4 | Belgavi | 130415 | 10339 | 4675 | 362 | 170 | 5207 | 5132 | 1967 | 2389 | 4356 | 776 |
| 5 | Bellary | 257521 | 51108 | 4898 | 0 | 795 | 5693 | 45415 | 18891 | 24025 | 42916 | 2499 |
| 6 | Bidar | 90294 | 30505 | 25069 | 96 | 0 | 25165 | 5340 | 150 | 3683 | 3833 | 1507 |
| 7 | Chamarajanagar | 144628 | 11355 | 2155 | 3 | 0 | 2158 | 9197 | 466 | 5467 | 5933 | 3264 |
| 8 | Chikkaballapura | 370415 | 61995 | 52424 | 192 | 0 | 52616 | 9379 | 1089 | 6911 | 8000 | 1379 |
| 9 | Chikkamagaluru | 467157 | 145111 | 102018 | 862 | 143 | 103023 | 42088 | 169 | 7805 | 7974 | 34114 |
| 10 | Chitradurga | 495826 | 206441 | 180849 | 240 | 0 | 181089 | 25352 | 3552 | 6248 | 9800 | 15552 |
| 11 | D.K.(Mangalore) | 563046 | 64521 | 49712 | 85 | 0 | 49797 | 14724 | 272 | 1234 | 1506 | 13218 |
| 12 | Davanagere | 136160 | 13379 | 6933 | 41 | 0 | 6974 | 6405 | 2433 | 2487 | 4920 | 1485 |
| 13 | Dharwad | 57577 | 5281 | 2510 | 663 | 34 | 3207 | 2074 | 311 | 940 | 1251 | 823 |
| 14 | Gadag | 94747 | 6852 | 5500 | 0 | 0 | 5500 | 1352 | 923 | 365 | 1288 | 64 |
| 15 | Hassan | 142009 | 74737 | 43129 | 42 | 0 | 43171 | 31566 | 543 | 2780 | 3323 | 28243 |
| 16 | Haveri | 111169 | 83284 | 20624 | 17 | 0 | 20641 | 62643 | 39588 | 22823 | 62411 | 232 |
| 17 | Kalaburgi | 89095 | 30966 | 21036 | 39 | 0 | 21075 | 9891 | 468 | 7394 | 7862 | 2029 |
| 18 | Kodagu | 124726 | 42887 | 31915 | 405 | 0 | 32320 | 10567 | 0 | 6967 | 6967 | 3600 |
| 19 | Kolar ^ | 363094 | 46906 | 37574 | 156 | 0 | 37730 | 9176 | 1127 | 4387 | 5514 | 3662 |
| 20 | Koppal | 110096 | 4232 | 643 | 0 | 0 | 643 | 3589 | 1379 | 1697 | 3076 | 513 |
| 21 | Mandya | 205021 | 33547 | 24869 | 8 | 0 | 24877 | 8670 | 2972 | 1990 | 4962 | 3708 |
| 22 | Mysore | 115994 | 34652 | 18063 | 1986 | 0 | 20049 | 14603 | 3122 | 9961 | 13083 | 1520 |
| 23 | Raichur | 128453 | 10204 | 6405 | 179 | 0 | 6584 | 3620 | 147 | 3470 | 3617 | 3 |
| 24 | Ramanagara | 171549 | 38026 | 34386 | 168 | 0 | 34554 | 3472 | 982 | 1884 | 2866 | 606 |
| 25 | Shimoga | 312638 | 144063 | 130084 | 865 | 5005 | 135954 | 8109 | 180 | 3794 | 3974 | 4135 |
| 26 | Tumkur | 447154 | 13062 | 1293 | 658 | 0 | 1951 | 11111 | 3109 | 5591 | 8700 | 2411 |
| 27 | U.K.(Karwar) | 11839 | 4089 | 3293 | 158 | 20 | 3471 | 618 | 75 | 433 | 508 | 110 |
| 28 | Udupi | 259868 | 111499 | 106084 | 109 | 0 | 106193 | 5306 | 681 | 1112 | 1794 | 3512 |
| 29 | Vijayanagara | 472512 | 58524 | 40090 | 26 | 0 | 40116 | 18408 | 1813 | 12818 | 14631 | 3777 |
| 30 | Vijayapura | 71068 | 4089 | 1548 | 3 | 0 | 1551 | 2538 | 765 | 721 | 1486 | 1052 |
| 31 | Yadgiri | 74793 | 8871 | 3624 | 3 | 0 | 3627 | 5244 | 442 | 4252 | 4694 | 550 |
| GRAND TOTAL | | 6272811 | 1427195 | 997198 | 9732 | 14048 | 1020978 | 406217 | 101567 | 168540 | 270108 | 136109 |

For General Manager 10/12

Karnataka Public Lands Corporation Limited